ಅ) ರಾಜ್ಯದಲ್ಲಿ ಸಾರಾಯಿ ಮಾರಾಟವನ್ನು ನಿಷೇದಿಸಲು ಆಲೋಚನೆ ಸರ್ಕಾರದ ಮುಂದಿದೆಯೇ?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ರಾಜ್ಯ ಸರ್ಕಾರಕ್ಕೆ ಕಳೆದ 5 ವರ್ಷಗಳಿಂದ ಸಾರಾಯಿ ಮಾರಾಟದಿಂದ ಬಂದಿರುವ ಆದಾಯ ಈ ರೀತಿ ಇರುತ್ತದೆ.

1)	1990-91	ರೂ.	304.12 ಕೋಟಿ
2)	1991-92	ರೂ.	405.55 ಕೋಟಿ
3)	1992-93	ರೂ.	376.18 ಕೋಟಿ
4)	1993-94	ರೂ.	473.11 ಕೋಟಿ
5)	1994-95	ರೂ.	547.03 ಕೋಟಿ
		ಒಟ್ಟು ರೂ.	2105.99 ಕೋಟಿ

ಆ) ಈ ವಿಷಯವು ಪರಿಶೀಲನೆಯಲ್ಲಿದೆ.

ಪಾನ ನಿಷೇಧದ ಬಗ್ಗೆ ಅಬಕಾರಿ ಸಚಿವರ ಭರವಸೆ

652 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾರಾಯಿ ಮಾರಾಟ ನಿಲ್ಲಿಸುವುದರ ಬಗ್ಗೆ ಅಬಕಾರಿ ಸಚಿವರು ಹಾಗೂ ಮುಖ್ಯಮಂತ್ರಿಗಳು ಬೇರೆ ಬೇರೆ ವೇದಿಕೆಗಳ ಮುಖಾಂತರ ಭರವಸೆ ನೀಡಿರುವುದು ನಿಜವೇ?

ಆ) ಮುಂದಿನ ಹಣಕಾಸು ವರ್ಷದಿಂದ ಸಾರಾಯಿ ಮಾರಾಟ ನಿಷೇಧಿಸುವುದರ ಜೊತೆಗೆ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಸಂಪೂರ್ಣ ಪಾನ ನಿಷೇಧ ಜಾರಿಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಇ) ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 125ನೇ ಜನ್ಮ ಶತಾಬ್ಧಿಯನ್ನು ನೈಜ ಅರ್ಥದಲ್ಲಿ ಆಚರಿಸಲು ಅಕ್ಟೋಬರ್ 2ನೇ ದಿನಾಂಕದೊಳಗಾಗಿ ರಾಜ್ಯ ಸರ್ಕಾರ ರಾಜ್ಯದಲ್ಲಿ ಸಾರಾಯಿ ಮಾರಾಟವನ್ನು ನಿಲ್ಲಿಸುವ ನಿರ್ಧಾರ ಪ್ರಕಟಿಸುವುದೇ?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಮಂತ್ರಿಗಳು) :

ಅ) ನಿಜ

ಆ) ಸಂಪೂರ್ಣ ಪಾನ ನಿಷೇದವನ್ನು ಜಾರಿಗೊಳಿಸಿದರೆ ಅದರಿಂದ ಉಂಟಾಗುವ ಅಡೆತಡೆಗಳು ಹಾಗೂ ಪರಿಣಾಮಗಳನ್ನು ಗುರುತಿಸಿರುವುದಿಲ್ಲ.

ಇ) ಮುಂದಿನ ಅಬಕಾರಿ ವರ್ಷದೊಳಗೆ ಈ ಬಗ್ಗೆ ಒಂದು ತೀರ್ಮಾನಕ್ಕೆ ಬರಲಾಗುವುದು.

ಅಬಕಾರಿ ಸೂಕ್ತ ವಾಣಿಜ್ಯ ತೆರಿಗೆ ನೋಂದಣಿ ಫೀ ಬಗ್ಗೆ

671 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೇ?

ಅ) ಕಳೆದ ಹಣಕಾಸು ವರ್ಷದ ಕೊನೆಯ ಮೂರು ತಿಂಗಳಲ್ಲಿ ಹಾಗೂ ಪ್ರಸಕ್ತ ಹಣಕಾಸು ವರ್ಷದ ಮೊದಲ ಮೂರು ತಿಂಗಳ ಅವಧಿಯಲ್ಲಿ ಸಂಗ್ರಹಿಸಲಾಗಿರುವ ಅಬಕಾರಿ ಸುಂಕ, ವಾಣಿಜ್ಯ ತೆರಿಗೆ, ನೋಂದಣಿ ಫೀ ಎಷ್ಟು?

ಆ) ಈ ಸಂಗ್ರಹಣೆಯನ್ನು ಹಿಂದಿನ ವರ್ಷಕ್ಕೆ ಹೋಲಿಸಿದರೆ ಎಷ್ಟು ಪ್ರಮಾಣದಲ್ಲಿ ಹೆಚ್ಚಳವಾಗಿದೆ?

ಶ್ರೀ ಸಿದ್ಧರಾಮಯ್ಯ, ಹಣಕಾಸು ಸಚಿವರು

(ಕೋಟಿ ರೂ.ಗಳಲ್ಲಿ)

	1994-95			1995-96		
	ಜನವರಿ	ಫೆಬ್ರವರಿ	ಮಾರ್ಚ್	ಏಪ್ರಿಲ್	ಮೇ	ಜೂನ್
ಅಬಕಾರಿ	68.52	58.92	115.87	36.29	67.43	63.80
ವಾಣಿಜ್ಯ ತೆರಿಗೆ	251.41	233.70	379.38	265.84	242.55	251.29
ನೋಂದಣಿ ಫೀ	33.11	38.52	49.18	36.10	41.76	47.28
ಆ) ಒಂದು ತಿಂಗಳಿನ ಶೇಕಡಾವಾರು ಹೆಚ್ಚಳವು ಅದೇ ತಿಂಗಳ ಹಿಂದಿನ ವರ್ಷಕ್ಕೆ ಹೋಲಿಸಿದಾಗ ಈ ಕೆಳಗಿನಂತಿದೆ						
ಅಬಕಾರಿ	26.68	6.41	23.24	1.54	2.15	11.27
ವಾಣಿಜ್ಯ ತೆರಿಗೆ	10.02	18.87	0.31	58.81	38.56	14.06
ನೋಂದಣಿ ಫೀ	62.14	62.39	106.55	58.89	51.14	80.25

ನಾರಾಯಣಪುರದ ಅಣೆಕಟ್ಟಿನ ಹಿನ್ನಾಡು ಪ್ರದೇಶದಲ್ಲಿ ಭೂಸಾರ ಸಂರಕ್ಷಣೆ

661 - ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಆಲಮಟ್ಟಿ ಹಾಗೂ ನಾರಾಯಣಪುರ ಅಣೆಕಟ್ಟುಗಳಿಗೆ ಹೂಳು ಹರಿದು ಬರದಂತೆ ಹಿನ್ನಾಡು ಪ್ರದೇಶ ಭೂಸಾರ ಸಂರಕ್ಷಣೆ ಮಾಡಲು ಸರ್ಕಾರದವರು ಕಾರ್ಯಕ್ರಮ ರೂಪಿಸಿದ್ದಾರೆಯೇ?

ಆ) ಹಾಗಿದ್ದಲ್ಲಿ, ಈ ಯೋಜನೆಯ ಅನುಷ್ಠಾನಕ್ಕೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಎಷ್ಟು ಹಣ ಒದಗಿಸಲಾಗಿದೆ?

ಶ್ರೀ ಹೆಚ್.ಡಿ. ದೇವೇಗೌಡ, ಮುಖ್ಯಮಂತ್ರಿಗಳು

ಅ) ರೂಪಿಸಲಾಗಿದೆ.

ಆ) 1995-96 ವರ್ಷದಲ್ಲಿ ರೂ. 97.68 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.